ಚುಟುಕು ಸುದ್ದಿ

ಕಟಕೋಳದಲ್ಲಿ ಬಸವ ಜಯಂತಿ

ಮುನವಳ್ಳಿ: ಕಟಕೋಳ ಗ್ರಾಮದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ ಏ.20 ರಂದು ಮಧ್ಯಾಹ್ನ 3 ಗಂಟೆಗೆ ಜರಗುವುದು. ಶಿವಾಜಿ ನಗರದ ಮಡ್ಡಿ ಬಸವೇಶ್ವರ ದೇವಸ್ಥಾನದಿಂದ ಜಗಜ್ಯೋತಿ ಬಸವೇಶ್ವರ ಭಾವಚಿತ್ರ ಮೆರವಣಿಗೆಗೆ ಕಟಕೋಳ ಕುಮಾರೇಶ್ವರ ವಿರಕ್ತಮಠದ ಸಚ್ಚಿದಾನಂದ ಶ್ರೀಗಳು ಚಾಲನೆ ನೀಡುವರು. ಸಕಲ ವಾದ್ಯಮೇಳಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕುಮಾರೇಶ್ವರ ವಿರಕ್ತಮಠ ತಲುಪಿ ನಂತರ ಸಾತಲಿಂಗೇಶ್ವರ ಚೌಕಿಮಠದಲ್ಲಿ ಸಮಾರಂಭ ಜರುಗುವುದು.

ಸಚ್ಚಿದಾನಂದ ಶ್ರೀಗಳು ಸಾನ್ನಿಧ್ಯ, ಅಧ್ಯಕ್ಷತೆ ರಾಮದುರ್ಗದ ಶಿವಮೂರ್ತೇಶ್ವರ ಮಠದ ಶಾಂತವೀರ ಶ್ರೀಗಳು, ನೇತೃತ್ವ ಚೌಕಿಮಠದ ನಾಗಭೂಷಣ ಶ್ರೀಗಳು, ತಂಗಡಗಿಯ ಅನ್ನದಾನ ಭಾರತ ಅಪ್ಪನ ಶ್ರೀಗಳಿಂದ ಅನುಭಾವ ನುಡಿಗಳು ಜರುಗಲಿವೆ. ಮುಖ್ಯಅತಿಥಿಗಳಾಗಿ ಸಾಹಿತಿ ವೈ.ಎಂ. ಯಾಕೊಳ್ಳಿ, ಎಸ್.ಎಂ. ದಿವಟಗಿ, ಶಿವಾನಂದ ಪಟ್ಟಣಶೆಟ್ಟಿ, ಸುತ್ತ-ಮುತ್ತಲಿನ ಭಜನಾ ಮಂಡಳಿಯವರು ಪಾಲ್ಗೊಳ್ಳುವರು.

ಬಸವ ಜಯಂತಿ ಗೋಷ್ಠಿ । ಮಹಿಳಾ ಸಬಲೀಕರಣಕ್ಕೆ ಅಣ್ಣನ ಕೊಡುಗೆ ಅನನ್ಯ । ಸಾಹಿತಿ ಡಾ. ವೀಣಾ ಎಲಿಗಾರ ಅಭಿಮತ

ಬಸವಣ್ಣ ಸ್ತ್ರೀ ಸಮಾನತೆಯ ಹರಿಕಾರ

ಬೆಳಗಾವಿ : ಇಂದಿಗೂ ಸಾಧ್ಯವಾಗದ ಸ್ತ್ರೀ ಸಮಾನತೆ 12ನೇ ಶತಮಾನದ ಮಾನವತಾವಾದಿ ಬಸವಣ್ಣನವರು ಮಹಿಳೆಯರ ಆತ್ಮಬಲ ಹೆಚ್ಚಿಸಿದರು. ಮಹಿಳಾ ಸಬಲೀಕರಣಕ್ಕೆ ಅವರು ನೀಡಿದ ಕೊಡುಗೆ ಅನನ್ಯವಾಗಿದೆ ಎಂದು ಸಾಹಿತಿ ಡಾ.ವೀಣಾ ಎಲಿಗಾರ ಹೇಳಿದರು.

ಬಸವ ಜಯಂತಿ ಅಂಗವಾಗಿ ವೀರಶೈವ ಲಿಂಗಾಯತ ಮಹಾಸಭೆಯು ಶಿವಬಸವ ನಗರ ಲಿಂಗಾಯತ ಭವನದಲ್ಲಿ ಆಯೋಜಿಸಿದ್ದ ಮಹಿಳಾ ಗೋಷ್ಠಿಯಲ್ಲಿ ಶಿವಶರಣರು ಕಂಡ ಬಸವಣ್ಣ ವಿಷಯದ ಮೇಲೆ ಅನುಭವ ಚಿಂತನೆ ಮಾಡಿದರು.

ಬಸವಣ್ಣನವರು ಒಂದು ಕಾಲಘಟ್ಟದಲ್ಲಿ ನಿಂತು ವರ್ಗ ವರ್ಣ ಲಿಂಗ ಸಮಾನತೆ ಕಲ್ಪಿಸಿದ್ದು ಸಾಮಾನ್ಯ ಕಾರ್ಯವಲ್ಲ. ಮಹಿಳೆ ಪುರುಷನಷ್ಟೇ ಸರಿಸಮಾನ ಎಂಬ ಪರಿಕಲ್ಪನೆಯನ್ನು ಸಮಾಜಕ್ಕೆ ನೀಡಿದರು. ಕಾಯಕದಲ್ಲಿ ಸಮಾನ ಅವಕಾಶ ನೀಡಿದರು. ಅವಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶ ನೀಡಿದರು. ಅನುಭವ ಮಂಟಪದಲ್ಲಿ ಮಹಿಳೆಯರ ವಿಚಾರಕ್ರಾಂತಿಗೆ ಕರೆ ನೀಡಿದರು ಎಂದು ಹೇಳಿದರು.

ಬೆಳಗಾವಿಯ ಲಿಂಗಾಯತ ಭವನದಲ್ಲಿ ಬಸವ ಜಯಂತಿ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಮಹಿಳಾ ಗೋಷ್ಠಿಯಲ್ಲಿ ಸಾಹಿತಿ ಡಾ.ವೀಣಾ ಎಲಿಗಾರ ಮಾತನಾಡಿದರು.

ಅಕ್ಕಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ, ಅಮುಗೆ ರಾಯಮ್ಮ, ಲಕ್ಕಮ್ಮ, ಅಲ್ಲಮ ಪ್ರಭುದೇವ, ಸಿದ್ಧರಾಮ, ಚನ್ನ ಬಸವಣ್ಣ, ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ ಮೊದಲಾದ ಶರಣರ ವಚನಗಳಲ್ಲಿ ಬಸವಣ್ಣನವರು ಉಲ್ಲೇಖಗೊಂಡಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಆಗಿದೆ ಎಂದು ಹೇಳಿದರು.

ಬಸವಣ್ಣನವರು ಭಕ್ತಿ ಭಂಡಾರಿ ಆಗಿ, ವಿಶ್ವಗುರು ಆಗಿ ನೀಡಿರುವ ಸಂದೇಶ ಯುಗ ಯುಗಗಳು ಕಳೆದರೂ ಅಮರವಾಗಿ ಉಳಿದಿವೆ. ಒತ್ತಡದ ಬದುಕಿಗೆ ಅವರ ವಚನಗಳು ದಿವ್ಯ ಔಷಧಿಯಂತಿವೆ. ನಿತ್ಯ ಬದುಕಿಗೆ ಅಳವಡಿಸಿಕೊಂಡಿದ್ದೆ ಆದರೆ ಜೀವನ ಸಫಲವಾಗುವುದು. ಅಂತಹ ಯುಗ ಪುರುಷ ಬಸವಣ್ಣನವರನ್ನು ವಿಶ್ವದ ಅನೇಕ ದೇಶಗಳು ಸ್ಮರಿಸುತ್ತೇವೆ. ಅವರ ತತ್ವದಲ್ಲಿ ಸಾಗೋಣವೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಹಾಸಭೆಯ ಜಿಲ್ಲಾ ಘಟಕದ ಅಧ್ಯಕ್ಷೆ ರತ್ನಪ್ರಭಾ ಬೆಲ್ಲದ ಮಾತನಾಡಿ, ಬಸವಣ್ಣವರು ಮಹಿಳಾ ಕುಲ ಉದ್ಧಾರಕರಾಗಿ ಸಮಾಜವನ್ನು ಎಚ್ಚರಿಸಿದ ಮಹಾನ್ ದಾರ್ಶನಿಕರು. ಮಹಿಳೆಯರನ್ನು ಸಾಮಾಜಿಕ ಮತ್ತು ಧಾರ್ಮಿಕವಾಗಿ ಮುಕ್ತರನ್ನಾಗಿ ಮಾಡಿ ಅವರನ್ನೂ ಸ್ವಾಭಿಮಾನಿಗಳನ್ನಾಗಿ ಮಾಡಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಯಾವ ದೇಶದವರು ಸಾಧಿಸದ್ದನ್ನು ಬಸವಣ್ಣವರು 800 ವರ್ಷಗಳ ಹಿಂದೆ ಸಾಧಿಸಿ ತೋರಿಸಿದರು. ಮಹಿಳಾ ಸಮಾಜದ ನಿಜವಾದ ಹರಿಕಾರರು ಬಸವಣ್ಣನವರು. ಇಂದು ನಾವೆಲ್ಲ ಒಂದೆಡೆ ಸೇರಿ ಚಿಂತನ ಮಂಥನ ಮಾಡಿದ್ದರೆ ಆದರೆ ಹಿಂದೆ ಬಸವಣ್ಣನವರ ಲಿಂಗ ಸಮಾನತೆಯ ತತ್ವ ಅಡಗಿದೆ ಎಂಬುದನ್ನು ವಿವೇದಿಸಬೇಕು. ಇಂದು ಬಸವ ಜಯಂತಿ ನಿಮಿತ್ತ ನಮ್ಮ ಮಹಾಸಭೆಯು ಪ್ರತ್ಯೇಕ ಮಹಿಳಾ ಘೋಷ್ಠಿ ಆಯೋಜಿಸುವ ಮೂಲಕ ಮಹಿಳೆಯರ ಆತ್ಮಬಲ ಹೆಚ್ಚಿಸಿದೆ ಎಂದು ನುಡಿದರು.

ಡಾ.ಗುರುದೇವಿ ಹುಲೆಪ್ಪನವರಮಠ, ಡಾ. ಎಚ್.ಬಿ. ರಾಜಶೇಖರ್, ಶೈಲಜಾ ಬಿಂಗೆ, ಜ್ಯೋತಿ ಬದಾಮಿ, ಆಶಾ ಯಮಕನಮರಡಿ, ವಿದ್ಯಾ ಗೌಡರ, ಮಹಾನಂದ ಲೋಕಣ್ಣವರ್ ಉಪಸ್ಥಿತರಿದ್ದರು. ಶಾರದಾ ಪಾಟೀಲ್ ನಿರೂಪಿಸಿದರು. ಬಸವರಾಜ್ ಮಾದಗೌಡ ಪ್ರಸಾದ ಸೇವೆ ಸಲ್ಲಿಸಿದರು. ಮಹಿಳಾ ಘಟಕದ ಎಲ್ಲ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

> ಅಣ್ಣ ಬಸವಣ್ಣನವರು ಇಡೀ ಭಾರತಕ್ಕೆ ಹಾಗೂ ಮಾನವ ಕೋಟಿಗೆ ಆದರ್ಶವಾಗಿ ನಿಲ್ಲುತ್ತಾರೆ. ಅಂತೆಯೇ 12ನೇ ಶತಮಾನದ ಅಸಂಖ್ಯ ಶರಣ ಶರಣೆಯರು ಬಸವಣ್ಣನವರನ್ನು ತಮ್ಮ ವಚನಗಳಲ್ಲಿ ಅಗಾಧವಾಗಿ ಸ್ಮರಿಸಿದ್ದಾರೆ. ಅವರ ಸಾಧನೆಗಳನ್ನು ಅವರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ.
>
> ■ **ಡಾ.ವೀಣಾ ಎಲಿಗಾರ** ಸಾಹಿತಿ

ಮಕ್ಕಳಿಲ್ಲದ ದಂಪತಿಗಳಿಗೆ ಸುವರ್ಣಾವಕಾಶ
ಉಚಿತ ಬಂಜೆತನ ನಿವಾರಣೆ ಮತ್ತು ಸ್ತ್ರೀ ರೋಗ ಉಪಚಾರ ಶಿಬಿರ
ರವಿವಾರ 26-04-2026 ಬೆ. 9 ರಿಂದ ಸಂ. 4 ರ ವರೆಗೆ
[illegible] (IUI, IVF, ICSI, IMSI) [illegible]
ಸಚೀನ ಹಾಸ್ಪಿಟಲ್ (ಟೆಸ್ಟ್‌ಟ್ಯೂಬ್ ಬೇಬಿ ಸೆಂಟರ್)
ಶಿವಾಜಿ ರೋಡ್, ಹೋಟೆಲ್ ಪ್ರಿಯದರ್ಶಿನಿ ಹತ್ತಿರ, ಮಿರಜ
ಡಾ. ಸಚೀನ 09422580842, 09765010834, ಡಾ. ನೇಹಾ 09421932401

ಚಿಕ್ಕೋಡಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದವರು ಪ್ರತಿಭಟನೆ ನಡೆಸಿದರು.

ಚಿಕ್ಕೋಡಿಯಲ್ಲಿ ಬಿಜೆಪಿ ಪ್ರತಿಭಟನೆ

ಚಿಕ್ಕೋಡಿ : ನಾರಿಶಕ್ತಿ ವಂದನಾ ಕಾಯ್ದೆ ವಿರೋಧಿಸಿರುವುದನ್ನು ಖಂಡಿಸಿ ಬಿಜೆಪಿ ಚಿಕ್ಕೋಡಿ ಮಹಿಳಾ ಮೋರ್ಚಾ ವತಿಯಿಂದ ಬಸವ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿ ಕಾಂಗ್ರೆಸ್ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬಲು ನಾರಿಶಕ್ತಿ ವಂದನಾ ಕಾಯ್ದೆ ಜಾರಿಗೆ ಮುಂದಾಗಿದ್ದರು. ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎನ್ನುವುದನ್ನು ಸಾಬೀತುಪಡಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕ್ಷೇತ್ರ ಪುನರವಿಂಗಡನೆಯಿಂದ ದೇಶದಲ್ಲಿ ಅಭಿವೃದ್ಧಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಈ ಕಾಯ್ದೆ ಜಾರಿಗೆ ತರಲು ಬಿಜೆಪಿ ನಾಯಕರು ಮುಂದಾಗಿದ್ದರು. ಆದರೆ ಕಾಂಗ್ರೆಸ್ ಪಕ್ಷ ಮಹಿಳಾ ಮಸೂದೆ ವಿರೋದಿಸುವ ಮೂಲಕ ಮಹಿಳೆಯರ ವಿರೋಧಿ ಎನ್ನುವುದನ್ನು ಸಾಬೀತು ಮಾಡಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಶಾಂಭವಿ ಅಶ್ವತಪುರ, ಜಿಲ್ಲಾಧ್ಯಕ್ಷೆ ಶಕುಂತಲಾ ಡೋಣವಾಡೆ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣಾ ಮುದಗುಡೆ, ರಾಜಶ್ರೀ ಗೊತೆ, ಆಶಾರಾಣಿ ಪಾಟೀಲ, ಚಿಕ್ಕೋಡಿ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ ಅಪ್ಪಾಜಿಗೋಳ, ಅಮೃತ ಕುಲಕರ್ಣಿ, ಶಿವಾನಂದ ನವೀನಾಳೆ ಇತರರು ಉಪಸ್ಥಿತರಿದ್ದರು.

ಟ್ಯಾಕ್ಸಿ ಮಾರ್ಗ ಸಮಸ್ಯೆ ಇತ್ಯರ್ಥಪಡಿಸಿ

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿದ ಸಂಸದ ಜಗದೀಶ ಶೆಟ್ಟರ್ ಅವರು ಚರ್ಚಿಸಿದರು.

ಬೆಳಗಾವಿ: ಸಂಸದ ಜಗದೀಶ ಶೆಟ್ಟರ್ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರನ್ನು ಭೇಟಿ ಮಾಡಿ ಬೆಳಗಾವಿ ವಿಮಾನ ನಿಲ್ದಾಣ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದರು.

ಪ್ರತ್ಯೇಕ ಟ್ಯಾಕ್ಸಿ ಮಾರ್ಗ ನಿರ್ಮಾಣ ಮಾಡಲು ಸುಮಾರು 16 ಎಕರೆ ಜಮೀನನ್ನು ವಾಯು ಸೇನೆಯಿಂದ ಹಸ್ತಾಂತರ ಮಾಡಬೇಕಿತ್ತು. ಅದರಂತೆ ಸಮಾನಾಂತರ ಮೌಲ್ಯದ ಜಮೀನನ್ನು

ಜಿಲ್ಲಾಧಿಕಾರಿಗಳು ಗುರುತಿಸಿ ನೀಡಲು ಒಪ್ಪಿದ್ದಾರೆ. ಆದರೆ ಬೆಳಗಾವಿ ವಾಯುಸೇನೆ ಇದಕ್ಕೆ ಸೂಕ್ತ ಸ್ಪಂದನೆ ನೀಡುತ್ತಿಲ್ಲ, ಇದರಿಂದ ಬೆಳಗಾವಿ ವಿಮಾನ ನಿಲ್ದಾಣ ಮುಚ್ಚುವ ಪರಿಸ್ಥಿತಿ ತಲುಪಿದೆ ಎಂದು ತಿಳಿಸಿ, ಆದ್ದರಿಂದ ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ಈ ವಿಷಯದ ಕುರಿತು ಸೂಚನೆ ನೀಡಲು ಮನವಿ ಮಾಡಲಾಯಿತು.

ಬೆಳಗಾವಿ ಕಂಟೋನ್‌ಮೆಂಟ್ ಬೋರ್ಡ್ ಅಧಿಕಾರಿಗಳು ಆಯ್ಕೆಯಾದ ಸಂಸದರ ಗಮನಕ್ಕೆ ತರದೆ ಹೂವಿನ ಮಾರುಕಟ್ಟೆ ಸ್ಥಾಪಿಸಲು ಜಾಗೆ ಲೀಸ್ ನೀಡಿರುವುದು ಕಾನೂನು ಬಾಹಿರ ಎಂದು ಸಂಸದರು ಕೇಂದ್ರ ಸಚಿವರಿಗೆ ತಿಳಿಸಿದರು.

ಬೆಳಗಾವಿ ಅಶೋಕನಗರದಲ್ಲಿ ಸರ್ಕಾರ ಹಸ್ತಾಂತರಿಸಿದ ಹೂವಿನ ಮಾರುಕಟ್ಟೆ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ನಗರದಲ್ಲಿ ಇನ್ನೊಂದು ಮಾರುಕಟ್ಟೆ ತೆರೆಯಲು ಸ್ಥಳೀಯ ಕೃಷಿ ಪತ್ತಿನ ಮಾರುಕಟ್ಟೆ ಸಮಿತಿ ಪರವಾನಿಗೆಯ ಅವಶ್ಯಕತೆ ಇದೆ. ಈ ಕಾನೂನನ್ನು ಪಾಲಿಸದೆ ಕಂಟೋನ್ಮೆಂಟ್ ಅಧಿಕಾರಿಗಳು ಪ್ರಸ್ತಾಪಿತ ಜಾಗದಲ್ಲಿ ಎರಡನೇ ಹೂವಿನ ಮಾರುಕಟ್ಟೆ ತೆರೆಯಲು ಮತ್ತು ಶೆಡ್ ನಿರ್ಮಾಣಕ್ಕೆ ಅವಕಾಶ ನೀಡಿರುವುದು ಕಾನೂನು ಬಾಹಿರ. ಈ ಕುರಿತು ಸ್ಥಳೀಯ ಹೂವಿನ ಮಾರಾಟಗಾರರು ಹಾಗೂ ವ್ಯಾಪಾರಸ್ಥರಿಂದ ವಿರೋಧ ವ್ಯಕ್ತವಾಗುತ್ತಿದೆ. ಬೆಳಗಾವಿ ಕಂಟೋನ್ಮೆಂಟ್ ಅಧಿಕಾರಿಗಳು ಯಾವುದೇ ನಿರ್ಣಯ ತೆಗೆದುಕೊಳ್ಳಬೇಕಾದಲ್ಲಿ ಸಂಸದರ, ಶಾಸಕರ ಅಭಿಪ್ರಾಯ ಕಡ್ಡಾಯವಾಗುವಂತೆ ಸೂಚಿಸಬೇಕು. ಸದ್ಯ ನೀಡಿರುವ ಪರವಾನಿಗೆ ರದ್ದುಪಡಿಸುವ ಬಗ್ಗೆ ಅಗತ್ಯ ಸೂಚನೆ ನೀಡುವಂತೆ ಸಂಸದರು ಸಚಿವರಿಗೆ ತಿಳಿಸಿದರು. ಎಲ್ಲ ವಿಷಯ ಆಲಿಸಿದ ಕೇಂದ್ರ ಸಚಿವರು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಮಾತನಾಡಿ, ಅಗತ್ಯ ನಿರ್ದೇಶನ ನೀಡುವ ಭರವಸೆ ನೀಡಿದ್ದಾರೆ ಎಂದು ಸಂಸದರು ತಿಳಿಸಿದ್ದಾರೆ.

ಮಹಿಳಾ ಮೀಸಲಾತಿ ನೆಪದಲ್ಲಿ ಕೇಂದ್ರದ ರಾಜಕೀಯ

ಚನ್ನಮ್ಮನ ಕಿತ್ತೂರು : ಸಂಸತ್ತಿನಲ್ಲಿ ಕ್ಷೇತ್ರ ವಿಂಗಡಣೆ ಮಸೂದೆ-2026 ವಿಫಲಗೊಂಡಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಕೆಪಿಸಿಸಿ ಸದಸ್ಯೆ ರೋಹಿಣಿ ಬಾಬಾಸಾಹೇಬ ಪಾಟೀಲ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಹಿಳಾ ಮೀಸಲಾತಿಯ ಹೆಸರಿನಲ್ಲಿ ಕೇಂದ್ರ ಸರ್ಕಾರವು ಸಾಂವಿಧಾನಿಕ ಮೌಲ್ಯಗಳನ್ನು ಗಾಳಿಗೆ ತೂರಲು ಪ್ರಯತ್ನಿಸಿತ್ತು ಎಂದು ಅವರು ವಿಷಾದಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿಯನ್ನು ಒಂದು ದಾಳವಾಗಿ ಬಳಸಿಕೊಂಡು, ತನ್ನ ರಾಜಕೀಯ ಲಾಭಕ್ಕಾಗಿ ಕ್ಷೇತ್ರ ವಿಂಗಡಣೆ ಮಸೂದೆಯನ್ನು ಅತ್ಯಂತ ತರಾತುರಿಯಲ್ಲಿ ಮಂಡಿಸಿತ್ತು. ಇದು ಮಹಿಳಾ ಸಬಲೀಕರಣದ ಹಿತದೃಷ್ಟಿಯಿಂದ ಮಾಡಿದ್ದಲ್ಲ, ಬದಲಾಗಿ ರಾಜಕೀಯ ಕುತಂತ್ರದಿಂದ ಕೂಡಿದ್ದಾಗಿತ್ತು. ಕಾಂಗ್ರೆಸ್ ಪಕ್ಷದ ನಿಲುವನ್ನು ಸ್ಪಷ್ಟಪಡಿಸಿದ ರೋಹಿಣಿ ಪಾಟೀಲ ಅವರು, "ಕಾಂಗ್ರೆಸ್ ಪಕ್ಷವು ಮೊದಲಿನಿಂದಲೂ ಮಹಿಳಾ ಮೀಸಲಾತಿಯ ಪರವಾದ ಗಟ್ಟಿಯಾದ ಚಿಂತನೆ ಹೊಂದಿದೆ. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂಬುದು ನಮ್ಮ ಪಕ್ಷದ ಅಚಲ ಬದ್ಧತೆ. ಆದರೆ, ಮೀಸಲಾತಿಯ ನೆಪದಲ್ಲಿ ಕ್ಷೇತ್ರ ವಿಂಗಡಣೆ ಹೇರಲು ಹೊರಟಿರುವುದು ಮತ್ತು ಈ ವಿಚಾರದಲ್ಲಿ ಆತುರದ ರಾಜಕೀಯ ನಿರ್ಧಾರ ಕೈಗೊಂಡಿರುವುದು ಸರಿಯಲ್ಲ. ಸರ್ಕಾರದ ಈ ಇಬ್ಬಗೆಯ ನೀತಿಯನ್ನು ನಾವು ಬಲವಾಗಿ ವಿರೋಧಿಸುತ್ತೇವೆ ಎಂದರು.

ಔಷಧಿ ಲಭ್ಯ
ಸಂಧಿವಾತ (ಮೊಣಕಾಲು ನೋವು). ಅಸ್ತಮಾ. ಅಲರ್ಜಿ. ಮೂಲವ್ಯಾಧಿ. ಕಿಡ್ನಿಸ್ಟೋನ್‌ಗೆ ಖಾತ್ರಿ ಔಷಧಿ ಕೊಡಲಾಗುವುದು.
ಲಕ್ಷ್ಮೇಶ್ವರ, ಜಿ: ಗದಗ
Mobile Number 9148652908

SK CLASSIFIED

ಹುಬ್ಬಳ್ಳಿ ಆವೃತ್ತಿ ದರ		
ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

ತುಂಬಿದ ಮನಗೊಂದು ಚಂದದ ಸಾಪ್ತಾಹಿಕ ಕರ್ಮವೀರ

WANTED
HYDRA-MOBILE CRANE OPERATOR
2 years experience
Contact :
Southern Ferro Ltd.,
Industrial Estate,
Gokul Road, Hubli-580 030
M : 9379829015

ಇಲೆಕ್ಟ್ರಿಷಿಯನ್ ಬೇಕಾಗಿದ್ದಾರೆ
ಇಲೆಕ್ಟ್ರಿಕಲ್ ಕೆಲಸದಲ್ಲಿ ಅನುಭವವಿರುವ ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ.
ಸಂಪರ್ಕಿಸಿರಿ:
ಪಾಟೀಲ ಇಕೋ ಕೇರ್
ಹುಬ್ಬಳ್ಳಿ
ಮೊ: 9695031666 7353976837

HOUSE / OFFICE / GUEST HOUSE FOR RENT
Ground Floor 2-BHK
House / Office / Guest House
for Rent in Apartment
(Behind Hubli Scan Center)
@ Deshpande Nagar,
Hubli. Contact:
7022398793

ಓದುಗರ ಗಮನಕ್ಕೆ
[illegible]
- ಜಾಹೀರಾತು ವ್ಯವಸ್ಥಾಪಕರು

ಮಾನಸಿಕ ಅಸ್ವಸ್ಥತೆ, ವ್ಯಸನ, ಲೈಂಗಿಕ ಸಮಸ್ಯೆಗಳು
ಸ್ಕಿಜೋಫ್ರೇನಿಯಾ, ಬೈಪೋಲಾರ್ ಮೂಡ್ ಡಿಸಾರ್ಡರ್, ಉನ್ಮಾದ, ಖಿನ್ನತೆ, ಒ.ಸಿ.ಡಿ., [illegible], ಮದ್ಯ, ತಂಬಾಕು, ಸಿಗರೇಟ್, ಗುಟಖಾ, ಮಾವಾ, ಗಾಂಜಾ, ಮಿಶ್ರಿ, ಡಿ-ಅಡಿಕ್ಷನ್, ಅಕಾಲಿಕ ಸ್ಖಲನ, ಶಕ್ತಿಹೀನತೆ, ಸ್ಖಲನ, ಹಸ್ತಮೈಥುನದಿಂದ ದೌರ್ಬಲ್ಯ, ಲೈಂಗಿಕ ಸಮಸ್ಯೆಗಳು ಮತ್ತು [illegible] ಇತ್ಯಾದಿ ಸಮಸ್ಯೆಗಳಿಗೆ ಸಂಪರ್ಕಿಸಿರಿ:
ನಿರ್ಮಲ ವ್ಯಸನಮುಕ್ತಿ ಪುನರ್ವಸತಿ ಮತ್ತು ಆರೈಕೆ ಕೇಂದ್ರ
ಸ್ಟೇಷನ್ ರಸ್ತೆ, ಮಿರಜ್ (ಸಾಂಗಲಿ)
ಸಂಪರ್ಕ: 9922646566 9028081339

SPACE FOR RENT



Ground Floor 1150 sq.ft.
First Floor 1250 Sq.ft.
R.S. Square, Opp. Bank of Maharashtra, Near Nehrunagar Water Tank, Gokul Road, Hubli
Contact:
M: 7899494991
9738910661

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್‌ಎಸ್‌ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H
6) ವಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ-ಮೇಲ್: skhubli@gmail.com

ಬೈಕ್ ಸವಾರ ಸಾವು

ಪಾಲಬಾವಿ: ಸಮೀಪದ ಕಪ್ಪಲಗುದ್ದಿ ಗ್ರಾಮದಲ್ಲಿ ಮುಧೋಳ-ನಿಪ್ಪಾಣಿ ರಾಜ್ಯ ಹೆದ್ದಾರಿ 18ರ ಕಪ್ಪಲಗುದ್ದಿ ಕ್ರಾಸ್ ಹತ್ತಿರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಓರ್ವ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಮೂಡಲಗಿ ತಾಲೂಕಿನ ತುಕ್ಕಾನಟ್ಟಿ ಗ್ರಾಮದ ಯಲ್ಲಪ್ಪ ಸಿದ್ದಪ್ಪ ಗದಾಡಿ(36) ಮೃತ ದುರ್ದೈವಿ. ಅಮಾವಾಸ್ಯೆ ನಿಮಿತ್ತ ನಸುಕಿನ ಸಮಯದಲ್ಲಿ ಮಗನನ್ನು ಕರೆದುಕೊಂಡು ಸದಾಶಿವಪ್ಪನ ದರ್ಶನ ಪಡೆಯಲು ಬಬಲಾದಿಗೆ ಹೊರಟಿದ್ದ ಎಂದು ತಿಳಿದುಬಂದಿದೆ. ಘಟನಾ ಸ್ಥಳಕ್ಕೆ ಸಿಪಿಐ ರತನಕುಮಾರ್ ಜೀರಿಗ್ಯಾಳ, ಪಿಎಸ್‌ಐ ಮಾಳಪ್ಪ ಪೂಜಾರಿ, ಎಎಸ್‌ಐ ಎಚ್.ಎಚ್. ಚೌಗಲಾ ಭೇಟಿ ನೀಡಿ ಪರಿಶೀಲಿಸಿದರು. ಈ ಕುರಿತು ಹಾರೂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಸ ಸವದಿ ಆರ್.ಸಿ ಸೆಂಟರನಲ್ಲಿ ನೂತನವಾಗಿ ಮಂಜೂರಾದ 110 ಕೆ.ವಿ ಸ್ಟೇಶನಗೆ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಶಾಸಕ ಲಕ್ಷ್ಮಣ ಸವದಿ ಅವರನ್ನು ಸನ್ಮಾನಿಸಲಾಯಿತು.

ವಿದ್ಯುತ್ ವಿತರಣಾ ಕೇಂದ್ರ ಮಂಜೂರು

ಮೋಳೆ : ಅಥಣಿ ಮತಕ್ಷೇತ್ರದಲ್ಲಿ ತಡೆ ರಹಿತ ಮತ್ತು ಗುಣಮಟ್ಟದ ವಿದ್ಯುತ್ ವಿತರಣೆಗಾಗಿ 110 ಕೆವಿ ಸಾಮರ್ಥ್ಯದ ಐದು ವಿದ್ಯುತ್ ವಿತರಣಾ ಕೇಂದ್ರ ಮಂಜೂರಾಗಿದ್ದು ಈಗಾಗಲೇ ಎರಡು ವಿದ್ಯುತ್ ವಿತರಣಾ ಕೇಂದ್ರಗಳ ನಿರ್ಮಾಣ ಕಾರ್ಯ ಪ್ರಾರಂಭಗೊಂಡಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಮತ್ತು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಹೊಸ ಸವದಿ ಆರ್.ಸಿ ಸೆಂಟರನಲ್ಲಿ ನೂತನವಾಗಿ ಮಂಜೂರಾದ 110 ಕೆ.ವಿ ಸ್ಟೇಶನಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತಿದ್ದರು. ತಾಲೂಕಿನ ಸವದಿ, ಯಲ್ಲಡಗಿ, ಸಂಕೋನಹಟ್ಟಿ, ಪಾರ್ಥನಹಳ್ಳಿ ಹತ್ತಿರ ಮತ್ತು ತೆಲಸಂಗ ಗ್ರಾಮಗಳಲ್ಲಿ 5 ವಿದ್ಯುತ್ ವಿತರಣಾ ಕೇಂದ್ರಗಳ ಪೈಕಿ ಈಗಾಗಲೇ ಯಲಿಹಡಲಗಿ ಗ್ರಾಮದ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿ ಪ್ರಗತಿಯಲ್ಲಿದೆ. ಸವದಿಯಲ್ಲಿ ಶಂಕುಸ್ಥಾಪನೆಗೊಂಡ 110ಕೆವಿ ಸ್ಟೇಶನ್ ಕಾಮಗಾರಿ ಪ್ರಾರಂಭಗೊಂಡಿದೆ. 2027 ಜನೇವರಿ ಅಂತ್ಯದೊಳಗಾಗಿ ಪೂರ್ಣಗೊಳ್ಳಲಿದೆ ಎಂದರು

ಇನ್ನುಳಿದ ತೆಲಸಂಗ, ಸಂಕೋನಹಟ್ಟಿ ಮತ್ತು ಪಾರ್ಥನಹಳ್ಳಿಯ ವಿದ್ಯುತ್ ವಿತರಣಾ ಕೇಂದ್ರಗಳ ಕಾಮಗಾರಿಗಳೂ ಕೂಡ ಕಾಂರ್ಯಾರಂಭ'ಗೊಳ್ಳಲಿವೆ. ಕೊಕಟನೂರ ಹತ್ತಿರ 220ಕೆವಿ ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರದ ಪ್ರಸ್ತಾವನೆಗೂ ಮಂಜೂರಾತಿ ದೊರಕಿದೆ. ಕೊಕಟನೂರ ಗ್ರಾಮದ ಹತ್ತಿರ ಇರುವ ಗೈರಾಣ ಜಾಗದಲ್ಲಿ ಸೋಲಾರ ಪಾರ್ಕ ನಿರ್ಮಾಣ ಮಾಡುವ ಪ್ರಸ್ತಾವನೆ ಕೂಡ ಸಿದ್ಧಗೊಂಡಿದ್ದು, ಕೆಲವೇ ದಿನಗಳಲ್ಲಿ ಈ ಯೋಜನೆಗೂ ಮಂಜೂರಾತಿ ದೊರಕಲಿದೆ ಎಂದು ಹೇಳಿದರು.

ಕೆಪಿಟಿಸಿಎಲ್ ಅಧಿಕಾರಿ ಎಂ.ಟಿ. ಅಪ್ಪಣ್ಣವರ, ಅಥಣಿ ಆಶೀರ್ವಾದ ಇಲೆಕ್ಟ್ರಿಕಲ್ ಮಾಲಿಕ ಅನೀಲರಾವ ದೇಶಪಾಂಡೆ ಮಾತನಾಡಿದರು. ಹೆಸ್ಕಾಂ ಅಧಿಕಾರಿಗಳಾದ ಗುರುರಾಜ ಸಂಪಣ್ಣವರ, ಶಬ್ಬೀರ ಪಾರ್ಥನಹಳ್ಳಿ, ಆಶೀರ್ವಾದ ಇಲೆಕ್ಟ್ರಿಕಲ್ ನ ಅಜಯ ದೇಶಪಾಂಡೆ, ಪ್ರಮೋದ ಜೋಶಿ, ಅಭಿಯಂತರರಾದ ಮಹೇಶ ಗಾಣಗಿ, ಶ್ರೇಯಸ್ ಜೋಶಿ, ಅಶೋಕ ಜಮಖಂಡಿ ಇದ್ದರು. ಪ್ರಮೋದ ಜೋಶಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಬಿಜೆಪಿ ಪ್ರಶಿಕ್ಷಣ ಅಭಿಯಾನ

ಬೈಲಹೊಂಗಲ : ತಾಲೂಕಿನ ಕೆ.ಬಿ. ಪಟ್ಟಿಹಾಳ ಗ್ರಾಮದ ಸಂಗೊಳ್ಳಿ ರಾಯಣ್ಣ ವೇದಿಕೆಯಲ್ಲಿ ಬಿಜೆಪಿ ಮಂಡಳದ ವತಿಯಿಂದ ಆಯೋಜಿಸಿರುವ ಮೂರು ದಿನಗಳ 'ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ – 2026' ಕಾರ್ಯಕ್ರಮಕ್ಕೆ ಭರ್ಜರಿ ಚಾಲನೆ ದೊರಕಿತು.

ಮಾಜಿ ಶಾಸಕರಾದ ಡಾ.ವಿಶ್ವನಾಥ ಪಾಟೀಲ, ಜಗದೀಶ ಮೆಟಗುಡ್ಡ ಅವರು ಸಂಯುಕ್ತವಾಗಿ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಡಾ.ವಿಶ್ವನಾಥ ಪಾಟೀಲ, ಇಂತಹ ಪ್ರಶಿಕ್ಷಣ ವರ್ಗಗಳು ಪಕ್ಷದ ಕಾರ್ಯಕರ್ತರಿಗೆ ಸೈದ್ಧಾಂತಿಕ ಸ್ಪಷ್ಟತೆ ನೀಡುವ ಜೊತೆಗೆ ಸಂಘಟನೆಯ ಬಲವರ್ಧನೆಗೆ ಸಹಕಾರಿಯಾಗುತ್ತವೆ ಎಂದರು. ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳನ್ನು ಸಾಮಾನ್ಯ ಜನರಿಗೆ ತಲುಪಿಸುವಲ್ಲಿ ಕಾರ್ಯಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.

ಮಾಜಿ ಶಾಸಕ ಜಗದೀಶ ಮೆಟಗುಡ್ಡ ಮಾತನಾಡಿದರು. ಮಾಜಿ ಶಾಸಕ ಸಂಜಯ ಪಾಟೀಲ, ಜಿಲ್ಲಾ ಅಧ್ಯಕ್ಷ ಸುಭಾಸ ಪಾಟೀಲ, ಮಂಡಳ ಅಧ್ಯಕ್ಷ ಸುಭಾಸ ತುರಮರಿ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಜಗದೀಶ ಬೂದಿಹಾಳ, ಜಿಲ್ಲಾ ಮುಖಂಡರಾದ ಮಹೇಶ ಮೋಹಿತೆ, ಗುರುಪಾದ ಕಳ್ಳಿ, ಜಿಲ್ಲಾ ಕಾರ್ಯದರ್ಶಿ ಗುರು ಮೆಟಗುಡ್ಡ ಭಾಗವಹಿಸಿದ್ದರು.

ಎಫ್.ಎಸ್. ಸಿದ್ದನಗೌಡರ, ಸಚಿನ್ ಕಡಿ, ಸಂದೀಪ ದೇಶಪಾಂಡೆ, ಸುಭಾಸ ಸಣ್ಣವೀರಪ್ಪನವರ, ವಿಶಾಲ್ ಬೋಗುರ, ಲಕ್ಕಪ್ಪ ಕಾರಗಿ ಸೇರಿದಂತೆ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂತೋಷ ಹಡಪದ ನಿರೂಪಿಸಿದರು. ಸಿದ್ದಾರೂಢ ಹೊಂಡಪ್ಪನವರ ಸ್ವಾಗತಿಸಿದರು.

ಕೆ.ಬಿ. ಪಟ್ಟಿಹಾಳ ಗ್ರಾಮದ ಸಂಗೊಳ್ಳಿ ರಾಯಣ್ಣ ವೇದಿಕೆಯಲ್ಲಿ ಬಿಜೆಪಿ ಮಂಡಳದ ವತಿಯಿಂದ ಪ್ರಶಿಕ್ಷಣ ಮಹಾಭಿಯಾನ-2026'ವನ್ನು ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಉದ್ಘಾಟಿಸಿದರು.

ಯಮಕನಮರಡಿ ಪೊಲೀಸರು ಕಳ್ಳತನವಾದ ದ್ವಿಚಕ್ರವಾಹನ ವಶಪಡಿಸಿಕೊಂಡಿರುವುದು.

ಬೈಕ್ ಕಳ್ಳತನ ಆರೋಪಿ ಬಂಧನ

ಉಳ್ಳಾಗಡ್ಡಿ-ಖಾನಾಪುರ : ಯಮಕನಮರಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವರದಿಯಾಗುತ್ತಿದ್ದ ಮೋಟಾರ ಸೈಕಲ್ ಕಳ್ಳತನ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾ ವರಿಷ್ಠಾಧಿಕಾರಿಗಳು ವಿಶೇಷ ತಂಡ ರಚಿಸಿ ಕಳ್ಳತನದ ಜಾಲ ಪತ್ತೆಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ ದಿ.11ರಂದು ನರಸಿಂಗಪುರ ಗ್ರಾಮದ ಅಂಡರ ಬ್ರಿಜ್ ಹತ್ತಿರ ಗಂಗವ್ವಾ ಕೊಡದವರ ಎಂಬುವವರ ಪ್ಲಾಟಿನಾ ಬೈಕ್ ಕಳ್ಳತನವಾಗಿತ್ತು. ಈ ಪ್ರಕರಣದ ತನಿಖೆಗಾಗಿ ಯಮಕನಮರಡಿ ಠಾಣೆಯ ಸಿಪಿಐ ಜೆ.ಎಫ್. ಮುಶಾಪುರಿ ಹಾಗೂ ಪಿಎಸ್‌ಐ ಬಿ.ಕೆ. ಪಾಟೀಲ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಜೆ.ಬಿ. ನಾಗನ್ನವರ, ಪಿ.ಕೆ. ಕಿಳ್ಳಿಕೇತರ ಅವರಿದ್ದ ವಿಶೇಷ ತನಿಖಾ ತಂಡ ಬೆನಕನಹೊಳಿ ಗ್ರಾಮದ ಬಳಿ ಕಾರ್ಯಾಚರಣೆ ನಡೆಸಿ ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಆರೋಪಿ ಬೆನಕನಹೊಳಿಯ ಸಂಜು ಮಲ್ಲಪ್ಪಾ ಮೇಕಲಿ(25) ಎಂಬಾತನನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಯಿಂದ ಜಿಲ್ಲೆ ಮತ್ತು ವಿವಿಧ ರಾಜ್ಯಗಳಲ್ಲಿ ಕಳ್ಳತನ ಮಾಡಿದ್ದ ಸುಮಾರು 8 ಬೈಕ್ ವಶಪಡಿಸಿಕೊಳ್ಳಲಾಗಿದೆ.

ಪ್ರಥಮ ಪುಣ್ಯಸ್ಮರಣೆ

ಜನನ 16-10-1945
ಮರಣ 19-04-2025
ದಿ. ಡಾ|| ನಿಂಗಪ್ಪ ಎಸ್. ಕುಚಬಾಳ
ಸಾ: ಬನಹಟ್ಟಿ, ತಾ: ಬಾಗಲಕೋಟೆ
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನೀವು ಪ್ರೀತಿ ವಾತ್ಸಲ್ಯದ ಪ್ರತೀಕವಾಗಿ, ನಮ್ಮೆಲ್ಲರಿಗೂ ಸ್ಫೂರ್ತಿಯ ಸೆಲೆಯಾಗಿದ್ದೀರಿ. ನಿಮ್ಮ ಪರೋಪಕಾರಿ ಜೀವನ, ಸರಳ ನಡೆ-ನುಡಿ, ಸೇವಾ ಮನೋಭಾವ ನಮ್ಮೆಲ್ಲರಿಗೂ ಆದರ್ಶವಾಗಿದೆ. ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚ ಹಸಿರಾಗಿದೆ. ಪರಮಾತ್ಮನು ತಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ: ಶ್ರೀಮತಿ ಸುಲೋಚನಾ ಎನ್. ಕುಂಚಬಾಳ, ಮಗಳು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗ

बैंक ऑफ़ बड़ौदा
Bank of Baroda
ಬ್ಯಾಂಕ್ ಆಫ್ ಬರೋಡ
ಪ್ರಾದೇಶಿಕ ಕಛೇರಿ ಒತ್ತಡಕ್ಕೊಳಪಟ್ಟ ಸ್ವತ್ತುಗಳ ರಿಕವರಿ ಶಾಖೆ, ಹುಬ್ಬಳ್ಳಿ
2ನೇ ಮಹಡಿ, ಬೆಲ್ಲದ ಟವರ್ಸ್, ಬನ್ನಿಗಿಡ ಸ್ವಾಪ್, ಗೋಕಲ ರಸ್ತೆ,
ಹುಬ್ಬಳ್ಳಿ-580030, ಕರ್ನಾಟಕ
ಇ-ಮೇಲ್: sarhub@bankofbaroda.com
ಇ-ಹರಾಜು ಮಾರಾಟ ಸೂಚನೆ

[ಅನುಬಂಧ-II ಎ ನಿಯಮ 6(2)ರೊಂದಿಗೆ ಚರಾಸ್ತಿಗಾಗಿ] [ಅನುಬಂಧ-IV-ಎ ಸ್ಥಿರಾಸ್ತಿಗಾಗಿ 8(6)ರ ನೊಬಂಧನೆಯನ್ನು ಉಲ್ಲೇಖಿಸಿ]
2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.

ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು/ಅವರ ಛಾರ್ಜಿನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್ ರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ" ಅವುಗಳನ್ನು ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ ಮೀಸಲು ಬೆಲೆ / ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡಂತಿವೆ :-

ಕ್ರ ಸಂ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲಕರು ಹೆಸರು ಮತ್ತು ವಿಳಾಸ	ಚರಾಸ್ತಿ/ಸ್ಥಿರಾಸ್ತಿ ಯ ವಿವರ: (ಅಧಿಕೃತ ಅಧಿಕಾರಿಗಳ ತಿಳುವಳಿಕೆ ಮೇರಗೆ ಆಸ್ತಿಯ ಮೇಲೆ ಬೇರೆ ಯಾವುದೇ ಋಣಭಾರ ಇದ್ದರೆ).	ಒಟ್ಟು ಬಾಕಿ ದಿ.12.04.2026 ರಂದು	ಇ-ಹರಾಜಿ ದಿನಾಂಕ ಸಮಯ: ಬಿಡ್ (ಹರಾಜು ಕೂಗುವ) ಸಮಯ	ಆಸ್ತಿಯ ಮೀಸಲು ಬೆಲೆ ಇಎಂಡಿ ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ (ರೂ)	ಆಸ್ತಿಯ ಸ್ವರೂಪ (ಸಾಂಕೇತಿಕ/ ಭೌತಿಕ)	ಆಸ್ತಿ ಪರಿಶಿಲನೆ ದಿನಾಂಕ ಮತ್ತು ಸಮಯ
1	1)ಶ್ರೀ ಪ್ರಸಾದ್ ಆನಂದ್ ಕುಲಕರ್ಣಿ, ತಂದೆ: ಆನಂದ್ ಕುಲಕರ್ಣಿ, ವಾಸ: ಪ್ಲಾಟ್ ನಂ. 46, ಗೋಕುಲ ನಗರ, ಮುತಗಾ, ಬೆಳಗಾವಿ – 591124. 2)ಶ್ರೀಮತಿ ಕ್ಷಿತಿಜಾ ಸತೀಶ್ ಜೋಶಿ, ಪತಿ: ಪ್ರಸಾದ್ ಆನಂದ್ ಕುಲಕರ್ಣಿ, ವಾಸ:# 1725, ರಾಮದೇವಗಲ್ಲಿ, ತಾಲೂಕು ಮತ್ತು ಜಿಲ್ಲೆ ಬೆಳಗಾವಿ-590001. ಜಿಪಿಎಸ್ ನಿರ್ದೇಶಾಂಕಗಳು: 15.856587 74.581944	ಬೆಳಗಾವಿ ಜಿಲ್ಲೆ ಮತ್ತು ಬೆಳಗಾವಿ ಉಪ-ನೊಂದಣಿ ವ್ಯಾಪ್ತಿಯ ಮುತಗಾ ಗ್ರಾಮದ ಆರ್.ಸ.ನಂ. 272/2 ರಲ್ಲಿನ ಪ್ಲಾಟ್ ನಂ. 46/ಎ, ಗಣಕೀಕೃತ ಉತಾರದಂತೆ ಸ್ವತ್ತು ನಂ: 150400303500122169ರಲ್ಲಿನ ಒಟ್ಟು 1200 ಚದರ ಅಡಿ ವಿಸ್ತೀರ್ಣದ ಜಮೀನು ಮತ್ತು ಅದರಲ್ಲಿ ನಿರ್ಮಿಸಲಾದ ಒಟ್ಟು 969.22 ಚದರ ಅಡಿ ವಿಸ್ತೀರ್ಣದ ನೆಲಮಹಡಿ + ಮೊದಲ ಮಹಡಿ, ಆರ್.ಸಿ.ಸಿ. ಕಟ್ಟಡ. ಈ ಸ್ವತ್ತು ಶ್ರೀ ಪ್ರಸಾದ್ ಆನಂದ್ ಕುಲಕರ್ಣಿ ಮತ್ತು ಶ್ರೀಮತಿ ಕ್ಷಿತಿಜಾ ಸತೀಶ್ ಜೋಶಿ ರವರ ಹೆಸಿರನಲ್ಲಿದೆ. ಚಕ್ಕಬಂದಿ: ಪೂರ್ವಕ್ಕೆ: ಪ್ಲಾಟ್ ನಂ. 46ಬಿ,ಪಶ್ಚಿಮಕ್ಕೆ: ಪ್ಲಾಟ್ ನಂ. 45, ಉತ್ತರಕ್ಕೆ: ಪ್ಲಾಟ್ ನಂ. 42 ಮತ್ತು 43, ದಕ್ಷಿಣಕ್ಕೆ: ರಸ್ತೆ. ಅಡಮಾನದಾರರು:ಶ್ರೀ ಪ್ರಸಾದ್ ಆನಂದ್ ಕುಲಕರ್ಣಿ ಮತ್ತು ಶ್ರೀಮತಿ ಕ್ಷಿತಿಜಾ ಸತೀಶ್ ಜೋಶಿ	ರೂ.45,47,625.02 (ನಲವತ್ತೈದು ಲಕ್ಷದ ನಲವತ್ತೇಳು ಸಾವಿರದ ಆರುನೂರ ಇಪ್ಪತ್ತೈದು ರೂಪಾಯಿ ಮತ್ತು ಎರಡು ಪೈಸೆ ಮಾತ್ರ) ಮತ್ತು ಅದರ ಮೇಲಿನ ಬಡ್ಡಿ ಹಾಗೂ ಖರ್ಚುಗಳು.	ಇ-ಹರಾಜಿನ ದಿನಾಂಕ: 19ನೇ ಮೇ 2026 ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 04:00 ಗಂಟೆಯವರೆಗೆ ಬಿಡ್ (ಹರಾಜು ಕೂಗುವ) ಸಮಯ: 19ನೇ ಮೇ 2026ರ ಬೆಳಿಗ್ಗೆ 10:00 ರಿಂದ ಸಂಜೆ 04:00 ಗಂಟೆಯವರೆಗೆ	1. ರೂ. 36,41,917.00 (ಮೂವತ್ತಾರು ಲಕ್ಷದ ನಲವತ್ತೊಂದು ಸಾವಿರದ ಒಂಬೈನೂರ ಹದಿನೇಳು ರೂಪಾಯಿ ಮಾತ್ರ) 2. ರೂ. 3,64,192.00 (ಮೂರು ಲಕ್ಷದ ಅರವತ್ತಾಲ್ಕು ಸಾವಿರದ ನೂರ ತೊಂಬತ್ತೆರಡು ರೂಪಾಯಿ ಮಾತ್ರ) (ಇ.ಎಂ.ಡಿ. ಮೊತ್ತವನ್ನು 19ನೇ ಮೇ 2026 ರಂದು ಅಥವಾ ಅದಕ್ಕಿಂತ ಮೊದಲು ಸಂಜೆ 03:00 ಗಂಟೆಯ ಒಳಗಾಗಿ ಜಮಾ ಮಾಡತಕ್ಕದ್ದು.) 3. ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ : ರೂ.25,000.00 (ಇಪ್ಪತ್ತೈದು ಸಾವಿರ ರೂಪಾಯಿ ಮಾತ್ರ)	ಭೌತಿಕ ಸ್ವಾಧೀನ	20.04.2026 ರಿಂದ 18.05.2026 ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆಯವರೆಗೆ (ರಜಾದಿನಗಳನು ಹೊರತುಪಡಿಸಿ)

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://www.bankofbaroda.in/e-auction ಹಾಗೂ baankent.com ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ 9482397247ಗೂ ಸಹ ಕರೆ ಮಾಡಬಹುದು.
ದಿನಾಂಕ:17.04.2026
ಸ್ಥಳ:ಹುಬ್ಬಳ್ಳಿ
ಸಹಿ/-ಮುಖ್ಯ ವ್ಯವಸ್ಥಾಪಕರು & ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ